doc-422
T-P-84

(1)

R No KRN - 14 | ಜೈ ಗೋಮಾತಾ | Jai Gomata | ಡಿಸೆಂಬರ್ 1974 December

ಗೋರಕ್ಷಣಾ, ಅಹಿಂಸಾ ಪ್ರಚಾರ ಪತ್ರಿಕೆ
ಇದಕ್ಕೆ ಲೇಖನ ಧನನೆರವು ನೀಡುವವರಿಗೆ ಪ್ರಚಾರಕರಿಗೆ ವಂದನೆಗಳು
ಅನೇಕ ಪ್ರತಿಗಳು ಉಚಿತವಾಗಿ ಹಂಚಲಾಗುತ್ತಿದೆ
ವಾರ್ಷಿಕ ಚಂದಾ ಅಂಚೆ ಮೂಲ್ಯ ರೂ. 1
ಬಿಡಿ ಪ್ರತಿ ಬೇಕಾದವರಿಗೆ 80 ಪೈಸೆ
ದೇಶಾದ್ಯಂತ ಗೋವಧೆ ಕೂಡಲೆ ನಿಲ್ಲಲಿ

ಗೋರಕ್ಷಣಾ
GORAKSHANA

Office– 1067 Chamarajapuram, Mysore 4

Silver Jubilee Year
ಬೆಳ್ಳಿಹಬ್ಬದವರ್ಷ

Please help in every way Th Humanitarian PropagandaPape Many Papers Dist ibuted Free

ವರ್ಷ 25 th Year | ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ | ಬಿಡಿ ಪ್ರತಿ ೫ ಪೈಸೆ

Cow Slaughter should be banned Immediately

Kannada version of the Article–

" Is Beef possible in Madhuparka ?"

From " A Review of Beef in Ancient India "

Compiled by Syt J. Dalmiaji

ಮಧುಪರ್ಕದಲ್ಲಿ ಗೋಮಾಂಸ ಸಾಧ್ಯವೇ ?

[ಮುಂದುವರಿದುದು]

ಇಲ್ಲಿಯವರೆಗೆ ವಿಧಿಗಳು ಆಶ್ವಲಾಯನ ಮತ್ತು ಪಾರಾಶರ ಗೃಹ್ಯ ಸೂತ್ರಗಳಲ್ಲಿ ಒಂದೇ ರೀತಿ ಇವೆ ; ಇಲ್ಲಿವರೆಗೆ ಮತಭೇದಕ್ಕೆ ಯಾವ ಅಂಶವೂ ಇಲ್ಲ : ತದನಂತರ ವೆತ್ಯಾಸವಿರುವ ಅರ್ಥವಿವರಣೆಗಳನ್ನು ಈ ಎರಡು ಗೃಹ್ಯ ಸೂತ್ರಗಳ ರೀತ್ಯಾ ಪ್ರತ್ಯೇಕವಾಗಿ ಮುಂದಿನ ಪ್ರಕರಣಗಳಲ್ಲಿ ಚರ್ಚಿಸಲಾಗುವುದು ಮಧುಪರ್ಕದ ಮಿಶ್ರಣ ಪದಾರ್ಥಗಳಲ್ಲಿ ಮಾಂಸದ ವಿಷಯ ಸೂಚಿಸಿಲ್ಲವೆಂದೂ ಸ್ನಾನೀರಿನಿಂದ ಬಾಯಿ ಮುಕ್ಕಳಿಸುವ ವರೆಗಿನ ವಿಧಿಗಳು ಮುಗಿಯುವವರೆಗೆ ಮಾಂಸದ ವಿಷಯ ಸೂಚಿಸಿಲ್ಲವೆಂದೂ ಇಲ್ಲಿ ತಿಳಿಸುವುದು ಸಾಕಾಗಿದೆ.

ಅತಿಥಿಯು ಆಗಮಿಸಿದ ನಂತರ, ಮಧುಪರ್ಕದಿಂದ ನಡೆಸುವ ಆತನ ಸತ್ಕಾರದಲ್ಲಿ ವಿಧಿಗಳು ಕ್ರಮಬದ್ಧವಾಗಿ ಅನುಪೂರ್ವವಾಗಿ ಅಡ್ಡಿಯಿಲ್ಲದೆ ನಡೆಸಲಾಗುವುದು: ಹೆಚ್ಚು ಕಾಲ ಕಾಯುವಂತಿಲ್ಲ: ಅಪದರಿಂದ, ಆ ತಕ್ಷಣ ಒಂದು ಹಸುವನ್ನು ವಧಿಸಿ ಅದರ ಮಾಂಸ ತೆಗೆದುಕೊಂಡು, ಬೇಯಿಸಿ, ಮಧುಪರ್ಕದಲ್ಲಿ ಬೆರೆಸಿ, ಅನಂತರ ಅದನ್ನು ಅತಿಥಿಗೆ ಕೊಡುವುದು ಸಾಧ್ಯವಾಗಿ ಕಂಡುಬರುವುದಿಲ್ಲ ಒಂದು ಹಸುವಿನ ವಧೆ, ಮಾಂಸ ತೆಗೆಯುವುದು, ನಂತರ ಬೇಯಿಸುವುದು ಹೆಚ್ಚು ಕಾಲ ಹಿಡಿಯುತ್ತದೆ; ಒಬ್ಬ ಗಣ್ಯ ಅತಿಥಿಯು ಅಷ್ಟು ದೀರ್ಘ ಕಾಲ ಕಾದಿರುವ ಅವಶ್ಯಕತೆ ಸಾಧ್ಯವಾಗಿ ಕಾಣಬರುವುದಿಲ್ಲ ; ಆಶ್ವಲಾಯನ ಅನುಯಾಯಿಗಳು ಗಣ್ಯ ಅತಿಥಿಯನ್ನು ಜೇನು ತುಪ್ಪಕ್ಕೂ ಕಾಯಿಸದೆ ಅದರ ಸ್ಥಾನದಲ್ಲಿ ತುಪ್ಪಕ್ಕೇ ಸಮ್ಮತಿಸುತ್ತಾರೆ.

ಇದೂ ಅಲ್ಲದೆ ಒಬ್ಬ ಅತಿಥಿಯು ಒಂದು ಹಸುವಿನ ಎಲ್ಲಾ ಮಾಂಸವನ್ನು ಸೇವಿಸಲಾರ : ಆ ಸಮಯಕ್ಕೆ ಬೇಕಾದ ಮಧುಪರ್ಕಕ್ಕೆ ಒಂದು ಔನ್ಸ್ ಮಾಂಸದಲ್ಲಿ ಒಂದು ಅಂಶ ಮಾತ್ರ ಬೇಕಾವುದು ಹೀಗಿರುವಾಗ, ಅಷ್ಟು ಸ್ವಲ್ಪ ಮಾಂಸಕ್ಕಾಗಿ ಒಂದು ಹಸುವಿನ ವಧೆಯು ಹೇಗೆ ಇಚ್ಛಿಸಲಾಗುವುದು ? ಅದುದರಿಂದ, ಅತಿಥಿಯು ಮಧುಪರ್ಕ ಸೇವಿಸಿ ಬಾಯಿ ಮುಕ್ಕಳಿಸಿದ ನಂತರ, ಒಂದು ಹಸುವನ್ನು ತಂದರೆ, ಅದು ಅವನಿಗೆ ದಾನಕೊಡಲು, ಅಥವಾ ಅವನು ಕಾಯದಿರದಂತೆ ಅವನಿಗೆ ಹಾಲು ಕರೆದು ಅರ್ಪಿಸಲಾಗುತ್ತದೆ.

ಮಧುಪರ್ಕದಲ್ಲಿ ಗೋದಾನ

ಕೆಲವು ಧರ್ಮಶಾಸ್ತ್ರಗಳು ಮಧುಪರ್ಕದಲ್ಲಿ ಗೋದಾನವನ್ನು ನಿರ್ದಿಷ್ಟವಾಗಿ ವಿಧಿಸಿವೆ. [ಮುಂದುವರಿಯುವುದು

ಅದರೂಪ ವನ್ಯಮೃಗ

ಅದರೂಪ ವನ್ಯಮೃಗವಾಗಿದ್ದ ಬಾಲಿಹುಲಿಯ ಸಂತತಿ ವಾಸ್ತವವಾಗಿ ಈಗ ಸಂಪೂರ್ಣವಾಗಿ ಅಳಿದುಹೋಗಿದೆಯೆಂದು ವನ್ಯಮೃಗಗಳ ಸಂಘ ಪ್ರಕಟಿಸಿದೆ.

Cow slaughter Ban

Acharya Vinoba Bhave writes as follaws [quoted from ' building from below – Essays on India's Cattle Economy "

" Cow slaughter should be banned by law It is said that such a legislation is not possible in a secular state because India is a multi-religious state

I have studied the Islamic scriptures and I can say with complete confidence that this sort of talk is an insult to Islam I say on behalf of Islam and I am sure that no Muslim will oppose me on this Issue that there is no ritual prescribed by the Holy Qoran which demands cow slaughter. The same can be said about Hindu scriptures which do not regard sacrifice an integral part of any ritual both Hindus and Muslims can never be really wise unless they give up sacrifice of animals in the name of religion During Emperor Akbar's regime cow slaughter was banned Our Government should realise that such a law is not opposed to the concept of secularism and so cowslaughter should be stopped by law.

Let me again summarize while concluding that it is entirely wrong to argue that a secular state cannot legislate for stopping cow slaughter '

★

– "Gandhiji on Cow protection"

The majority of the modern English Educated people would not weep even at the death of his parents, but if a cattle of the farmer dies, his eyes immediately start shedding tears.

ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳವರ ಪ್ರೈವೇಟ್ ಸೆಕ್ರೆಟರಿಯವರ ಪತ್ರ

ತಮ್ಮ ತಾ || 17–11–74 ರ ಪತ್ರವನ್ನು ತಮ್ಮ ಪ್ರಣಾಮಗಳೊಂದಿಗೆ ಶ್ರೀಶ್ರೀಗಳವರ ಚರಣಕಮಲಗಳಲ್ಲಿ ಸಮರ್ಪಿಸಲಾಯಿತು.

ಶ್ರೀ ಶಾರದಾ ಶ್ರೀ ಚಂದ್ರಮೌಳೀಶ್ವರರ ಪರಮಾನುಗ್ರಹದಿಂದ ತಮ್ಮ ' ಗೋರಕ್ಷಣಾ ವಾರ್ಷಿಕವೂ ಪ್ರಚಾರ ಪತ್ರಿಕೆಯ ಬೆಳ್ಳಿ ಹಬ್ಬವು ವೈಭವದಿಂದಲೂ ಸರ್ವಾಂಶ್ನವಾಗಿಯೂ ನೆರವೇರಲೆಂದೂ ಶ್ರೀಶ್ರೀಗಳವರು ಆಶೀರ್ವದಿಸಿ ಅನುಗ್ರಹಿಸಿರುವ ಮಂತ್ರಾಕ್ಷತೆ ಶ್ರೀ ಶಾರದಾ ಶ್ರೀ ಚಂದ್ರಮೌಳೀಶ್ವರರ ಪ್ರಸಾದವಗಳನ್ನು ಕಳುಹಿಸಿರುತ್ತೇನೆ.
ಶ್ರೀ ಶ್ರೀಗಳವರು ಅನುಗ್ರಹಿಸಿರುವ ಧನ ನೆರವು ರೂ 50 ನ್ನು ಮನಿಯಾರ್ಡರ್ ಕಳುಹಿಸಿರುತ್ತೇನೆ.

★

The Agent, Sri Jain Mutt, Sravanabelagola, writes—

Received your letter of 17 th Nov Sri Swamiji desires to send herewith Rs 51 with His Blessings wishing grand success to Silver Jubilee Celebrations

★

ಸತ್ಯ ಮತ್ತು ಅಹಿಂಸೆ

(ಮಹಾತ್ಮಾ ಗಾಂಧಿಯವರ ಸಂದೇಶ – ಲೇ : ಯು ಎಸ್. ಮೋಹನರಾವ್)

ಅಹಿಂಸೆಯಿಂದ ಅಧಿಕಾರವನ್ನು ಪಡೆಯಲು ಅಥವಾ ಅಧಿಕಾರವನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಕ್ಕಿಲ್ಲ ಇದು ಅಹಿಂಸೆಯ ಧ್ಯೇಯವೂ ಅಲ್ಲ ಆದರೆ ಅಹಿಂಸೆಯಿಂದ ಇದಕ್ಕೂ ಹೆಚ್ಚಿನದನ್ನು ಸಾಧಿಸಬಹುದಾಗಿದೆ ಸರ್ಕಾರದ ಆಡಳಿತ ವ್ಯವಸ್ಥೆಯನ್ನು ವಹಿಸಿಕೊಳ್ಳದೆ, ಅಧಿಕಾರದಲ್ಲಿರುವವರಿಗೆ ಸನ್ಮಾರ್ಗವನ್ನು ತೋರಲು ಪರಿಣಾಮಕಾರಿಯಾದ ಹತೋಟಿಯನ್ನು ಪಡೆಯಲು ಅಹಿಂಸೆಯು ಒಂದು ಉತ್ತಮ ಸಾಧನವಾಗಿದೆ. ಇದೇ ಅಹಿಂಸೆಯಲ್ಲಿನ ಸ್ವಾರಸ್ಯವಾಗಿದೆ.

ತಪ್ಪಿಸ್ಥರನ್ನು ಕಂಗೆಡಿಸುವುದು ಸತ್ಯಾಗ್ರಹಿಯ ಉದ್ದೇಶವಾಗಿರಬಾರದು ನಾವು ಕೈಗೊಳ್ಳುವ ಕ್ರಮವು ಅವನ ಮನ ಮುಟ್ಟಬೇಕು ತಪ್ಪಿಸ್ಥರ ಮನವೊಲಿಸಿ ಅವರನ್ನು ಪರಿವರ್ತಿಸುವುದೇ ಸತ್ಯಾಗ್ರಹಿಯ ಧ್ಯೇಯವಾಗಿರಬೇಕೆ ವಿನಹ ಅವರನ್ನು ಬೆದರಿಸುವುದಲ್ಲ ಸತ್ಯಾಗ್ರಹಿಯು ತನ್ನ ಕೆಲಸ ಕಾರ್ಯಗಳಲ್ಲಿ ಅಸ್ವಾಭಾವಿಕವಾದ ಕ್ರಮಗಳನ್ನು ಕೈಗೊಳ್ಳಬಾರದು ಸತ್ಯಾಗ್ರಹಿಯು ಪಾಪಜ್ಞಾನದ ಎಚ್ಚರಿಕೆಯಿಂದ ಸಹಜವಾಗಿ ವರ್ತಿಸಬೇಕು

ಸತ್ಯಾಗ್ರಹಿಯು ತಪ್ಪು ಮತ್ತು ತಪ್ಪಿಸ್ಥರ ನಡುವಣ ಅಂತರವನ್ನು ಎಂದೂ ಮರೆಯಬಾರದು ತಪ್ಪಿಸ್ಥರ ಬಗ್ಗೆ ದ್ವೇಷ ಸಾಧಿಸಬಾರದು ಸತ್ಯಾಗ್ರಹಿಯು ಕೆಡಕನ್ನು ಒಳಿತಿಂದಲೂ, ಬಿಟ್ಟನ್ನು ಪ್ರೀತಿಯಿಂದಲೂ, ಅಸತ್ಯವನ್ನು ಸತ್ಯದಿಂದಲೂ ಮತ್ತು ಹಿಂಸೆಯನ್ನು ಅಹಿಂಸೆಯಿಂದಲೂ ಜಯಿಸಲು ಪ್ರಯತ್ನಿಸಬೇಕು ವಿಶ್ವದಲ್ಲಿರುವ ಕೆಡಕನ್ನು ಅಸತ್ಯವನ್ನು ನಿರ್ಮೂಲಗೊಳಿಸಲು ಇದನ್ನು ಬಿಟ್ಟು ಅನ್ಯ ಮಾರ್ಗವಿಲ್ಲ

ಸತ್ಯಾಗ್ರಹವು ನಾವು ಕೈಗೊಳ್ಳಬಹುದಾದ ನೇರ ಕ್ರಮಗಳ ಪೈಕಿ ಒಂದು ಪ್ರಬಲ ಅಸ್ತ್ರವಾಗಿದೆ ಇತರ ಎಲ್ಲಾ ಕ್ರಮಗಳೂ ವಿಫಲವಾದಲ್ಲಿ ಮಾತ್ರ, ಸತ್ಯಾಗ್ರಹವನ್ನು ಆಚರಿಸಬೇಕು. ಆದ್ದರಿಂದ ಸತ್ಯಾಗ್ರಹಿಯು ಪದೇ ಪದೇ ಮೇಲಿನ ಅಧಿಕಾರಿಗಳನ್ನು ಭೇಟಿಯಾಗಿ ತನ್ನ ನಿಲುವನ್ನು ಸ್ಪಷ್ಟಪಡಿಸಿ, ಕಾರ್ಯ ಸಾಧಿಸಿಕೊಳ್ಳಲು ಪ್ರಯತ್ನಿಸಬೇಕು. ಸಾರ್ವಜನಿಕರ ಅಭಿಪ್ರಾಯವನ್ನು ಅರಿತುಕೊಂಡು ಅವರ ಬೆಂಬಲ ಪಡೆಯಬೇಕು ಸಾರ್ವಜನಿಕರಿಗೆ ತನ್ನ ನಿಲುವಿನ ಬಗ್ಗೆ ಮಾಹಿತಿ ನೀಡಬೇಕು. ಅವರ ಮನ ಒಲಿಸಲು ಪ್ರಯತ್ನಿಸಬೇಕು ಈ ಎಲ್ಲ ಕ್ರಮಗಳೂ ವಿಫಲವಾದಲ್ಲಿ ಮಾತ್ರ, ಸತ್ಯಾಗ್ರಹವನ್ನು ಆಚರಿಸಬೇಕು. ಆದರೆ ಅಂತರಾತ್ಮದ ಕರೆಗೆ ಓಗೊಟ್ಟು ಯಾವೇ ಆಗಲೀ ಸತ್ಯಾಗ್ರಹವನ್ನು ಪ್ರಾರಂಭಿಸಿದಲ್ಲಿ ಅದರಿಂದ ವಿಮುಖರಾಗಲು ಸಾಧ್ಯವಿಲ್ಲ .

ಸತ್ಯಾಗ್ರಹಿಯು ಕಾರಾಗೃಹ ವಾಸದ ಶಿಕ್ಷೆಯನ್ನು ಅನುಭವಿಸಲು ಒಪ್ಪಿಕೊಳ್ಳುವುದು, ಅಧಿಕಾರ ವರ್ಗದವರನ್ನು ಕಂಗೆಡಿಸುವುದಕ್ಕಲ್ಲ ತನ್ನ ನಿರ್ದೋಷವನ್ನು ಪ್ರದರ್ಶಿಸಿ ಅಧಿಕಾರ ವರ್ಗದವರನ್ನು ಪರಿವರ್ತಿಸುವ ಉದ್ದೇಶದಿಂದ ಆತನು ಪೆರೆ ಮನೆಗೆ ಹೋಗುತ್ತಾನೆ ಬಂಧಿಖಾನೆಗೆ ಹೋಗಲು ನಿಮಗೆ ನೈತಿಕ ಯೋಗ್ಯತೆ ಅರ್ಹತೆಗಳಿರಬೇಕಾದ್ದು ಅತ್ಯಗತ್ಯ ಇಲ್ಲದಿದ್ದಲ್ಲಿ ನಿಮ್ಮ ಈ ಕ್ರಮವು ನಿಷ್ಫಲವಾಗಿ ಕೊನೆಯಲ್ಲಿ ನಿಮಗೆ ನಿರಾಶೆಯಾಗುವುದು ಸಹಜವಾಗಿದೆ.

ಸತ್ಯಾಗ್ರಹಿಯು ಶಂಕೆಯನ್ನೂ, ಭಯ ಭೀತಿಯನ್ನು ಬಿಡುವುದು ಅಗತ್ಯ. ಯಾವ ಭೀತಿಯೂ ಇಲ್ಲದೆ ಪ್ರತಿಸ್ಪರ್ಧಿಯನ್ನು ಸಂಪೂರ್ಣವಾಗಿ ನಂಬುವ ಮನೋಸ್ಥೈರ್ಯ ಸತ್ಯಾಗ್ರಹಿಗಿರಬೇಕಾದುದ್ದು ಅಗತ್ಯ ತನ್ನ ಪ್ರತಿಸ್ಪರ್ಧಿಯು ಇಪ್ಪತ್ತು ಸಲ ಸುಳ್ಳು ಹೇಳಿದರೂ ಸತ್ಯಾಗ್ರಹಿಯು ಆತನಲ್ಲಿರುವ ತನ್ನ ನಂಬಿಕೆಯನ್ನು ಬಿಟ್ಟು ಕೊಡಬಾರದು ಏಕೆಂದರೆ ಮನುಷ್ಯ ಸ್ವಭಾವದಲ್ಲಿ ಅಚಲ ನಂಬಿಕೆಯನ್ನು ಇಟ್ಟುಕೊಳ್ಳುವುದೇ ಸತ್ಯಾಗ್ರಹದ ತತ್ವವಾಗಿದೆ.

ವ್ಯಕ್ತಿಗಳಿಗೆ, ಅದರಲ್ಲೂ ಕೆಲವೊಂದು ಸಂದರ್ಭಗಳಲ್ಲಿ ಮಾತ್ರ ಅಹಿಂಸೆಯನ್ನು ಬೋಧಿಸಬಹುದು ಆದರೆ ಸಾರ್ವಜನಿಕರಿಗೆ ಸಾಮೂಹಿಕವಾಗಿ ಅಹಿಂಸೆಯನ್ನು ಬೋಧಿಸಲು ಸಾಧ್ಯವಿಲ್ಲವೆಂದು ಅನೇಕರು ಭಾವಿಸಿದ್ದಾರೆ.

ನನ್ನ ಅಭಿಪ್ರಾಯದಲ್ಲಿ ಇದು ಒಂದು ತಪ್ಪು ಭಾವನೆ ಆಗಿದೆ. ಮಾನವ ಕುಲವು ಅಹಿಂಸೆಯನ್ನು ರೂಢಿ ಮಾಡಿಕೊಳ್ಳದಿದ್ದಲ್ಲಿ ಅದು ಎಂದೋ ನಿರ್ನಾಮವಾಗಿ ಹೋಗುತ್ತಿತ್ತು ಆದರೆ ಅಹಿಂಸೆಯ ಮತ್ತು ಹಿಂಸೆಯ ಬಲಾಬಲದ ಬಗ್ಗೆ ವಾದವಿವಾದ ನಡೆದಾಗಲೆಲ್ಲ ಅಹಿಂಸೆಗೆ ಜಯದೊರೆತಿರುವುದು ವಿದಿತವಾಗಿದೆ.

Silver Jubilee of 'Gorakshana'

When Journals devoted to the pious and noble cause of cow-protection, kindness to animals, ahimsa, etc, are very few and dharmic papres are short-lived, it is rejoicing that the 'Gorakshana' will be celebrating its unique Silver jubilee early and in a befitting manner Donations and Messages from philanthropic, Gomata-interested humanitarian persons are fervently solicited, and this act of kindness will be gratefully acknowledged and ever remembered.

Editor 'Gorakshana" Chamarajapuam, Mysore 4r

ಆಕರ್ಷಣೀಯ ಪಕ್ಷಿಧಾಮ !

ಮೈಸೂರಿಗೆ ಸುಮಾರು 10 ಮೈಲಿಗಳ ದೂರದಲ್ಲಿರುವ ರಂಗನತಿಟ್ಟು, ಪಕ್ಷಿಧಾಮವೊಂದೆ ಆಗಿರದೆ ಮೀನು ಮತ್ತು ಮೊಸಳೆಗಳ ತಳಿ ಅಭಿವೃದ್ಧಿ ಕೇಂದ್ರ ಸಹ ಆಗುತ್ತಿದೆ ರಂಗನತಿಟ್ಟು ನೈಸರ್ಗಿಕ ಪಕ್ಷಿಧಾಮವಾಗಿದ್ದು ಪಕ್ಷಿಗಳ ಸಂತಾನೋತ್ಪತ್ತಿ ಕೇಂದ್ರವೂ ಆಗಿರುವುದೊಂದು ವಿಶೇಷ ವರ್ಷಕ್ಕೆ ಮೂರು ಸಾವಿರದಿಂದ 5 ಸಾವಿರದಷ್ಟು ಪಕ್ಷಿಗಳು ಇಲ್ಲಿಗೆ ಬಂದುಹೋಗುತ್ತವೆ 30 ಅಡಿಗಳ ಆಳಕ್ಕೂ ಇಳಿದು ಮೀನನ್ನು ಹಿಡಿಯುವ ಸ್ಪೂನ್ ಬಿಡ್ ಎಂಬ ಪಕ್ಷಿ ಪ್ರಭೇದಗಳನ್ನು ಆಕರ್ಷಣೆ ಮಾಡುತ್ತವೆ.

ಶ್ರೀ ಮಹಾವೀರ ಉವಾಚ

ಎಲ್ಲ ಪ್ರಾಣಿಗಳು ದೀರ್ಘಾಯುಷ್ಯಕ್ಕಾಗಿ ಬಯಸುತ್ತವೆ ಸುಖವನ್ನು ಬಯಸುತ್ತವೆ ದುಃಖವೆಂದರೆ ಬಳಲುತ್ತವೆ ಮರಣಕ್ಕೆ ಅಂಜುತ್ತವೆ. ಬದುಕನ್ನು ಪ್ರೀತಿಸುತ್ತವೆ. ಬದುಕಿಗಾಗಿ ಕಾರ್ಯಪ್ರವೃತ್ತವಾಗುತ್ತವೆ ಸಂಸಾರದಲ್ಲಿ ಜೀವನವು ಎಲ್ಲ ಪ್ರಾಣಿಗಳಿಗೂ ಪ್ರಿಯವಾದುದು

ಭಯ ಮತ್ತು ವೈರದಿಂದ ನಿವೃತ್ತನಾದ ಸಾಧಕನು ಎಲ್ಲ ಪ್ರಾಣಿಗಳನ್ನು ಆತ್ಮಸಮಾನವಾಗಿ ಕಂಡು ಹಿಂಸಾಪ್ರವೃತ್ತಿಯಿಂದ ರಹಿತನಾಗಿರುವದು

ಜೀವಹಿಂಸೆಯು ತನಗೇ ಆಗುವ ಹಿಂಸೆಯಾಗಿದೆ ಜೀವದಯೆಯೂ ತನಗೆ ಸಲ್ಲುವ ದಯೆಯಾಗಿದೆ ಈ ದೃಷ್ಟಿಯನ್ನರಿಸಿಕೊಂಡ ಆತ್ಮಾರ್ಥಿಗಳಾದ ಸಾಧಕರು ಹಿಂಸೆಯನ್ನು ಸರ್ವಥಾ ಪರಿತ್ಯಜಿಸುವರು.

ಲೋಕದಲ್ಲಿ ಕಂಡುಬರುವ ಉತ್ತಮ ಸುಖ, ಪ್ರಭುತ್ವ, ಸಹಜ ಸೌಂದರ್ಯ, ಆರೋಗ್ಯ, ಸೌಭಾಗ್ಯ ಇವೆಲ್ಲವೂ ಅಹಿಂಸೆಯ ಫಲಗಳೇ ಆಗಿವೆ

ಈ ಮಾತನ್ನು ಚೆನ್ನಾಗಿ ತಿಳಿದುಕೂ ಲೋಕದಲ್ಲಿ ಕಂಡುಬರುವ ಎಲ್ಲ ದುಃಖಗಳೂ ಹಿಂಸೆಯ ಫಲಗಳು.

ನಿನಗೆ ಹೇಗೆ ದುಃಖವು ಅಪ್ರಿಯವೋ ಹಾಗೆ ಲೋಕದಲ್ಲಿರುವ ಎಲ್ಲ ಪ್ರಾಣಿಗಳಿಗೂ ಅದು ಅಪ್ರಿಯವಾದುದು. ಹೀಗೆ ತಿಳಿದು ಎಲ್ಲ ಪ್ರಾಣಿಗಳಲ್ಲಿ ಆತ್ಮಸಮಾನವಾದ ಅವರವಿಡು.

ಅನ್ಯರಿಗೆ ಹಿತವನ್ನುಂಟು ಮಾಡುವ ಮಾತನ್ನು, ಅದು ಸತ್ಯವೇ ಆಗಿದ್ದರೂ ಆಡಬಾರದು ಏಕೆಂದರೆ ಅದು ಪಾಪಕಾರಿಯಾಗಿದೆ.

— ಮೈಸೂರು ಪತ್ರಿಕೆ

★★

ಗಾಂಧಿ ಪಾಣಿ

ಗೋರಕ್ಷಣೆ ಮಾನವನ ಅವಿರ್ಭಾಗದಲ್ಲಿ ಒಂದು ಆಶ್ಚರ್ಯಕರವಾದ ಸಂಗತಿ. ಇದು ಮನುಷ್ಯನನ್ನು ತನ್ನ ವರ್ಗದಿಂದ ಆಚೆಗೆ ಒಯ್ಯುವುದು ಗೋವೆಂದರೆ ಸಂಪೂರ್ಣ ಅಮಾನುಷ ಲೋಕ.

(3)

FRUGALITY

If frugality were established in the state, if our expenses were laid out rather in the necessaries than the superfluities of life, there might be fewer wants, and even fewer pleasures, but infinitely more happiness.

– Goldsmith

DALMIA CEMENT (BHARAT) LIMITED

Dalmiapuram (Tamil Nadu)

Head Office: 4 Scindia House, New Delhi - 110001

'ಗೋರಕ್ಷಣ' ದ ಬೆಳ್ಳಿ ಹಬ್ಬ

ಗೋರಕ್ಷಣೆ, ಪ್ರಾಣಿದಯೆ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿ ಇರುವಾಗ, "ಗೋರಕ್ಷಣ" ವು ತನ್ನ ಬೆಳ್ಳಿ ಹಬ್ಬವನ್ನು ಬೇಗನೇ ಮತ್ತು ಯಶೋಚಿತವಾಗಿ ಆಚರಿಸುವ ಸಂದರ್ಭವೊದಗಿರುವದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ 'ಗೋರಕ್ಷಣ" ದ ಬೆಳ್ಳಿ ಹಬ್ಬ ಆಚರಣೆಗೆ ಧನ ನೆರವು ಮತ್ತು ಸಂದೇಶಗಳನ್ನು ದಯಪಾಲಿಸಬೇಕೆಂದೂ, ಇದನ್ನು ಕೃತಜ್ಞತಾಪೂರ್ವಕ ಸ್ಮರಿಸಲಾಗುವುದೆಂದೂ ಸವಿನಯನಾಗಿ ತಿಳಿಸುತ್ತೇವೆ

ಸಂಪಾದಕ, ಗೋರಕ್ಷಣ ಪತ್ರಿಕೆ
ಚಾಮುಂಡಿಪುರಂ, ಮೈಸೂರು 4

ದಯೆಯೇ ಧರ್ಮದ ಮೂಲವಯ್ಯ.
— ಜಗಜ್ಯೋತಿ ಬಸವೇಶ್ವರ

ಅಹಿಂಸೋ ಪರಮೋಧರ್ಮಃ
— ಜೈನಧರ್ಮದ ಮುಖ್ಯತತ್ವ

Animal sacrifices are forbidden and none of our rituals ever offer meat — Par i Zarathusra Religion

Of all the sacred vows I am [the vow of] harmlessness, Ahims — Lord Krishna

The meat of a cow is disease (mar), its milk is health (safa) its ghee is medicine (dava).
– Al-Ghazalji

Not even to win Swaraj will I renounce my principle of cow protection .... I will not be a party to cow slaughter
– Gandhiji

ಜೋಡೆತ್ತಿನಿಂದ ದನಕರುಗಳು

★

ನವೆಂಬರು ನಡೆದುಹೋಯಿತು ; ಅದು ಹೊಸದಲ್ಲ ; ಅದರೂ ಎಂಟು ವರ್ಷಗಳ ಹಿಂದಿನ ನವೆಂಬರು ತಿಂಗಳನ್ನು ಈ ನವೆಂಬರು ನೆನಪಿಗೆ ತಂದಿದೆ ; 1966 ರ ನವೆಂಬರಿನಲ್ಲಿ, ದಿಲ್ಲಿಯಲ್ಲಿ ಗೋವಧೆಯನ್ನು ತಡೆಯಿರೆಂದು ಮಠ–ಸಂಪ್ರದಾಯ ವಗೈರೆಗಳನ್ನು ಮರೆತು, ಸಾಧುಸನ್ಯಾಸಿಗಳು ಒಂದಾಗಿ ನಿಂತು ದಿಲ್ಲಿ ದೇವತೆಗಳ ಬಳಿ ಕೇಳಿಕೊಂತಲು , ದಿಲ್ಲಿ ದೇವತೆಗಳಿಗೆ ದಯೆ ಬರಲಿಲ್ಲ ; ಅವರು ಸಾಧು ಸನ್ಯಾಸಿಗಳನ್ನು ದೂಷಿಸಿದರು ; ಅವರ ಮೇಲೆ ಅಲ್ಲಸಲ್ಲದ ಆರೋಪಗಳನ್ನು ಹೊರಿಸಿದರು ; ಅಷ್ಟೇ ಅಲ್ಲ ; ನ್ಯಾಯಾಲಯಕ್ಕೆಳೆದುಕೊಂಡು ಹೋದರು : ಆ ಸಮಯದಲ್ಲಿ ರಾಜಧಾನಿಯಲ್ಲಿ ಇಲ್ಲದೇ ಇದ್ದ ಮಹಾಪುರುಷರನ್ನೂ ವೇದಿಕೆಯ ಮೇಲೆ ಕಂಡರು ! ಆ ಮೇಲೆ ಬಿಸಿತಟ್ಟಾಗ ಕ್ಷಮೆಬೇಡಿದರು ಈ ಚಳವಳಿಯನ್ನು ಹತ್ತಿಕ್ಕಲು ರಾಜದಂಡಕ್ಕೆ ಸಾಧ್ಯವಾಗಲಿಲ್ಲ ; ಬ್ರಹ್ಮದಂಡ ಶಾಂತವಾಗಿ ದೃಢವಾಗಿ ನಿಂತುಕೊಂಡಿದೆ ; ಚಳವಳಿ ಶಾಂತವಾಗಿ ಸಾಗುತ್ತಿದೆ ದಿಲ್ಲಿ ದೇವತೆಗಳು ಅರೋಪಿಗಳೆಂದು ದೂಷಿಸಿದವರನ್ನು ನ್ಯಾಯಾಧೀಶರು ನಿರ್ದೋಷಿಗಳೆಂದು ಸಾರಿರುತ್ತಾರೆ. ಸಾಧುಗಳು ಗೋಹತ್ಯೆಯನ್ನು ಪ್ರತಿಬಂಧಿಸಿರೆಂದು ಸಂಸದನೆದುರು ಪ್ರದರ್ಶನ ನಡೆಸಿದುದನ್ನು ಅವರಿಂದ ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ ; ಅವರ ಮೇಲೆ ಅಮಾನುಷ ರೀತಿಯಲ್ಲಿ ಹಿಂಸಾಚಾರವನ್ನು ನಡೆಸಲಾಗಿತ್ತು.

ಅದು ಅಂದಿನ ದುರ್ಘಟನೆ ; ಈಗಲಾದರೂ ದಿಲ್ಲಿಯ ದೇವತೆಗಳಿಗೆ ತಮ್ಮ ತಪ್ಪಿನ ಅರಿವಾಗಿದೆಯೇ ? ಜೋಡೆತ್ತಿನ ಬದಲಾಗಿ ದನಕರುಗಳು ಬಂದಿವೆಯಾದರೂ ಗೋಮಾತೆಯ ಗೋಳು ನಿಂತಿರುವುದಿಲ್ಲ ; ಆಕೆಯ ರಕ್ಷಣೆ ಕುರಿತು ಯೋಚಿಸುವವರಾರೂ ಇಲ್ಲ ; ಅವಳ ಚಿತ್ಕಾರವನ್ನು ತೋರಿಸಿ ಅಧಿಕಾರಕ್ಕೆ ಬರಲು ಮನಸ್ಸಿದೆಯೇ ವಿನಃ ಗೋಹತ್ಯೆಯನ್ನು ಪ್ರತಿಬಂಧಿಸುವ ಗೋಭಕ್ತರಾರೂ ಕಂಡುಬರುತ್ತಿಲ್ಲ.

ಇನ್ನಾದರೂ ಗೋಹತ್ಯೆ ಕೂಡದೇ ಪ್ರತಿಬಂಧಿಸಲ್ಪಡಲಿ. — ಶಿವಶಂಕರ

ಪಕ್ಷಿಗಳ ಕಳ್ಳ ಸಾಗಾಣಿಕೆ

ಆಸ್ಟ್ರೇಲಿಯಾದಿಂದ ಹಲವು ಮಿಲಿಯ ಡಾಲರುಗಳ ವ್ಯವಹಾರದಲ್ಲಿ ಅಪರೂಪವಾದ ಪಕ್ಷಿಗಳು ಹಾವುಗಳು ಮತ್ತಿತರ ಪ್ರಾಣಿಗಳ ಕಳ್ಳಸಾಗಾಣಿಕೆ ಸೇರಿದೆ.

ಸರ್ವಜ್ಞ ವಾಣಿ

ಕೊಲುವ ಧರ್ಮವನೊಯ್ದು ಒಲೆಯೊಳಗೆ ಇಕ್ಕುವಾ
ಕೊಲಲಾಗದೆಂಬ ಜೈನನಾ ಮತವೆನ್ನೆ
ತಲೆಯ ಮೇಲಿರಲಿ ಸರ್ವಜ್ಞ.

ಮೈಸೂರಿನ ವುಡ್‌ಲಾಂಡ್ 20 12 74 ರಿಂದ

ಮೃಗಾಲಯ !!! ಅಪೋಘ 2 ನೇ ವಾರ

ಅಪೂರ್ವ ಆನ್ಯೂಮನ್ ಶೋಲಯ್ ನುಲಯೂಳಂ ಕಲಾಕೃತಿ

ಚೆಟ್ಟಿಕ್ಕಾರಿ

ಕಾಶ್ಯ— ಲಕ್ಷ್ಮೀ ಮೋಹನ್ ದಿನ ೫ ಪ್ರದರ್ಶನಗಳು

ಅಪೂರಾ 18 12 74 ರಿಂದ

ಎ ಪಿ ಎಂ ಕಾಜನ್ ಎಳ ಆರ್ ಅಲ್ವಾಸು ವಿಜಯಶ್ರೀ ಕುಮಾರಿ ಜಯ ಅಭಿನಯಿಸಿರುವ

1949 ರಲ್ಲಿ ತಮಿಳು ಚಿತ್ರ

ಮಗಳು ಕ್ಕಾಗ

ದಿನ 3 ಪ್ರದರ್ಶನಗಳು

ಮೃಗ-ಪಕ್ಷಿಗಳನ್ನು ಪಳಗಿಸಿ ಸಾಕುವುದು ಮಾನವನಿಗೆ ಮೊದಲಿನಿಂದಲೂ ಬೆಳೆದು ಬಂದ ಹವ್ಯಾಸ ಹಾಗೆ ಸಾಕುವಾಗ ಆ ಪ್ರಾಣಿಗಳ ಪ್ರಾಕೃತಿಕವಾದ ವಾತಾವರಣಕ್ಕೆ ಧಕ್ಕೆ ಬರದಂತೆ ನೋಡಿಕೊಂಡು ಅವುಗಳ ಸಹಜ ಪ್ರವೃತ್ತಿಯನ್ನು ಪೋಷಿಸುವಲ್ಲಿ ಆತನಿಗೆ ಹೆಚ್ಚಿನ ಆನಂದ ಅದಕ್ಕಾಗಿ ರಾಷ್ಟ್ರದ ನಾನಾ ಕಡೆ ಪ್ರಖ್ಯಾತವಾದ ಮೃಗಾಲಯಗಳನ್ನು ವ್ಯವಸ್ಥಿತವಾಗಿ ಸ್ಥಾಪಿಸಲಾಗಿದೆ ರಾಷ್ಟ್ರದ ಪ್ರಮುಖ ಮೃಗಾಲಯಗಳ ಸಾಲಿನಲ್ಲಿ ಸೇರುವ ಮೈಸೂರಿನ ಮೃಗಾಲಯ ವಿಶ್ವದ ವಿಹುತೇಕ ಪ್ರಾಣಿಪಕ್ಷಿಗಳನ್ನೊಳಗೊಂಡ ಆಕರ್ಷಕ ಕ್ಷೇತ್ರ. ಸುಂದರವಾದ ಉದ್ಯಾನವನವನ್ನೂ ಒಳಗೊಂಡಿರುವುದು ಈ ಮೃಗಾಲಯದ ಮತ್ತೊಂದು ವಿಶೇಷ

ಮೈಸೂರು ನಾಗರೀಕರಿಗೆ ಅದೊಂದು ಚಿರಸ್ಮರಣೀಯ ವರ್ಷ 1892 ರಲ್ಲಿ ಮೈಸೂರಿನ ಮಹಾರಾಜ ದಿವಂಗತ ಶ್ರೀಮನ್ಮಹಾರಾಜ ಜಾಮರಾಜೇಂದ್ರ ಬಿಡೆಯರ್‌ರವರು ತಮ್ಮ ಪ್ರಜಾಕೋಟಿಗೆ ಅರಣ್ಯಗಳಲ್ಲಿ ವಾಸಿಸುವ ಅನೇಕ ಹೆಕ್ಕಿ ಪಕ್ಷಿಗಳು ಮತ್ತು ಪ್ರಾಣಿಗಳ ಸಮೀಪ ದರ್ಶನ ಒದಗಿಸುವ ಸಲುವಾಗಿ ಒಂದು ಮೃಗಾಲಯವನ್ನು ಸ್ಥಾಪಿಸುವುದರ ಮೂಲಕ ಬಹುದಿನಗಳ ಅಗತ್ಯವೊಂದನ್ನು ಪೂರೈಸಿದರು.

ಸಂಸ್ಥಾಪಕರ ಹೆಸರನ್ನು ಚಿರಸ್ಮರಣೀಯಗೊಳಿಸಲು ಈ ಪ್ರಾಣೀಸ್ ಉದ್ಯಾನವನಕ್ಕೆ 1909 ರಲ್ಲಿ ಶ್ರೀ ಜಾಮರಾಜೇಂದ್ರ ಜೂಲಾಜಿಕಲ್ ಗಾರ್ಡನ್ಸ್ ಎಂದು ನಾಮಕರಣ ಮಾಡಲಾಯಿತು.

ಮೃಗಾಲಯದಲ್ಲಿರುವ ಉದ್ಯಾನವನವನ್ನು ಮೃಗಾಲಯದ ಪ್ರಾಣಿಗಳ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾಗಿ ವ್ಯವಸ್ಥೆಗೊಳಿಸಬೇಕು ಎಂಬುವುದು ಸಸ್ಯ ಸಂಪತ್ತು ಮತ್ತು ಪ್ರಾಣಿ ಸಂಪತ್ತು ಇವೆರಡೂ ಅವಿಭಾಜ್ಯವಾದುದು ಎಂಬುದನ್ನು ಅರಿತಿದ್ದ ಮಹಾರಾಜರ ಅಭಿಲಾಷೆಯಾಗಿತ್ತು.

ಈ ಮೃಗಾಲಯವನ್ನು ಸ್ಥಾಪಿಸುವುದಕ್ಕೆ ಮೊದಲು ಈಗ ಸಸ್ಯಶಾಸ್ತ್ರದ ಮೌಲ್ಯದ ದೃಷ್ಟಿಯಿಂದ ಪುರಸ್ಕೃತವಾಗಿರುವ ಬೆಂಗಳೂರಿನ ಲಾಲ್‌ಬಾಗಿನಲ್ಲಿ ಕೆಲವು ವನ್ಯ ಪ್ರಾಣಿಗಳನ್ನು ಮತ್ತು ಪಕ್ಷಿಗಳನ್ನು ಇಡಲಾಗಿತ್ತು. ಈ ಮೃಗಾಲಯಕ್ಕೆ ಪೂರ್ವದಲ್ಲಿ ಲಾಲಬಾಗಿನಲ್ಲಿ 1874 ರಿಂದಲೂ ಹಲವಾರು ಬಗೆಯ ಪಕ್ಷಿಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣಿಗಳಿಂದ ಕೂಡಿದ ಪಕ್ಷಿ-ಪ್ರಾಣಿಧಾಮವೊಂದನ್ನು ವ್ಯವಸ್ಥೆಗೊಳಿಸಲಾಗಿತ್ತು.

ಬೆಂಗಳೂರು ಲಾಲ್‌ಬಾಗಿನಿಂದ ಎಲ್ಲ ಪ್ರಾಣಿಗಳನ್ನೂ ಕ್ರಮೇಣ ಮೈಸೂರು ಮೃಗಾಲಯಕ್ಕೆ ವರ್ಗಾಯಿಸುವ ವ್ಯವಸ್ಥೆ ಮಾಡಲಾಯಿತು 1970 ರ ವೇಳೆಗೆ ಎಲ್ಲಾ ಪ್ರಾಣಿಗಳನ್ನೂ ಮೈಸೂರು ಮೃಗಾಲಯಕ್ಕೆ ವರ್ಗಾಯಿಸುವುದು ಸಾಧ್ಯವಾಯಿತು ಮತ್ತು ಅಂದಿನಿಂದ ಇದೊಂದು ಪರಿಪೂರ್ಣ ಮೃಗಾಲಯವಾಗಿ ಹೆಸರುವಾಸಿಯಾಗಿದೆ.

ಶ್ರೀ ಸಿದ್ಧರಾಜೆ ಅರಸುರವರ ಕಾರ್ಯಭಾರದ ಅವಧಿಯಲ್ಲಿ ಮೃಗಾಲಯಕ್ಕೆ ಕೆಲವಾರು ಸಿಂಹ ಮತ್ತು ಹುಲಿಗಳನ್ನು ಸೇರಿಸಿದರು ಅವರು ತಮ್ಮಲ್ಲಿ ಯಾವುದೇ ಆಯುಧವಿಲ್ಲದೆ ನಿರ್ಭೀತರಾಗಿ ಅವುಗಳ ಮಧ್ಯೆ ಓಡಾಡುತ್ತಿದ್ದರು. ಈ ಭೀಕರ ಮೃಗಗಳು ಅವರ ಬಗ್ಗೆ ಪಡೆದಿದ್ದ ವಾತ್ಸಲ್ಯ ನಿಜಕ್ಕೂ ಸೋಜಿಗವನ್ನುಂಟು ಮಾಡುವಂತಹದು.

●

— ಜನಪದ ವಾರಪತ್ರಿಕೆಯಿಂದ ಆಯ್ದುದೆ

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ

Help The Gorakshana

—HumanitarianPropoganda Monthly—

Protect the Cow

Edited Printed and Published by Dharmapracharanirata M S. Krishna Rao (Proprietor) at the Satyagrahi Press, Chamarajapuram Mysore